**ಮೇಷ್ಟ್ರು:** ಮೊದಲ ಬಾರಿಗೆ ವಿಮಾನ ಎಲ್ಲಿಂದ ಎಲ್ಲಿಗೆ ಹಾರಿತು.

**ಗುಂಡ:** ಭೂಮಿಯಿಂದ ಆಕಾಶಕ್ಕೆ.

***

**ಮೇಷ್ಟ್ರು:** 9.6ರಿಂದ 158 ಅನ್ನು ಭಾಗಿಸಿ, 49 ಅನ್ನು ಕೂಡಿದರೆ ಏನು ಬರುತ್ತದೆ?

**ಗುಂಡ:** ತಲೆನೋವು ಬರುತ್ತದೆ ಸಾರ್.

***

**ಜಡ್ಜ್:** ಸಾಕ್ಷಿ ಇಲ್ಲದ ಕಾರಣ ನಿನ್ನನ್ನು ಬಿಡುಗಡೆ ಮಾಡಲಾಗಿದೆ.

**ಕಳ್ಳ:** ಪ್ರಭು! ಹಾಗಾದರೆ ಕದ್ದ ವಸ್ತುಗಳನ್ನು ನಾನೇ ಇಟ್ಟುಕೊಳ್ಳಬಹುದಾ?

***

**ಮೇಷ್ಟ್ರು:** ಕೊರೊನಾ ಅಂದರೆ ಏನು?

**ಗುಂಡ:** ಕೊರೊನಾ ಒಂದು ಹಬ್ಬ. ಅದಕ್ಕೆ ಶಾಲೆಗಳಿಗೆ ಮತ್ತು ಆಫೀಸ್‌ಗಳಿಗೆ ಲಾಕ್‌ಡೌನ್ ರಜೆ ಅಂತ ಕೊಡ್ತಾರೆ.

***

**ಹೆಂಡತಿ:** ನಿಮ್ಮನ್ನು ನೋಡೋಕೆ ಡಾಕ್ಟರ್ ಬಂದಿದ್ದಾರೆ.

**ಗಂಡ:** ನಂಗೆ ಮೈ ಹುಷಾರಿಲ್ಲ. ಅವರನ್ನು ನಾಳೆ ಬರೋಕೆ ಹೇಳು!

***

**ಹೆಂಡತಿ:** ರೀ... ನನ್ನ ಸ್ಕಿನ್ ತುಂಬಾ ಆಯ್ಲಿ ಆಗಿದೆ ಏನ್ ಮಾಡಬೇಕು?

**ಗಂಡ:** ವಿಮ್ ಬಾರ್ ತಗೊ. ಪೂರ್ತಿ ಜಿಡ್ಡಿನ ಕೊಳೆ ತೆಗೆದುಬಿಡುತ್ತದೆ.

***

**ಅಪ್ಪ:** ಎಲ್ಲಿಗೆ ಹೋಗ್ತಿದ್ದೀಯಾ?

**ಗುಂಡ:** ಸ್ನಾನ ಮಾಡೋಕೆ.

**ಅಪ್ಪ:** ಸ್ನಾನ ಮಾಡೋಕೆ ಮೊಬೈಲ್ ತಗೊಂಡ್ ಹೋಗ್ತಾರಾ?

**ಗುಂಡ:** ಬಕೆಟ್ ತುಂಬುವವರೆಗೂ ಏನ್ ಮಾಡ್ಲಿ.

***

**ಮೇಷ್ಟ್ರು:** ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ




ಗುಂಡ ಡೈವೋರ್ಸ್ ಪಡೆದ. ತನ್ನ ಅರ್ಧ ಸಂಬಳವನ್ನು ಹೆಂಡತಿಗೂ ಕೊಡಲು ಕೋರ್ಟ್ ಹೇಳಿತು. ಅದನ್ನು ಕೇಳಿ ಗುಂಡ, 'ಇನ್ಮೇಲೆ ನನ್ನ ಸಂಬಳದಲ್ಲಿ ಅರ್ಧ ನಂಗೂ ಸಿಗುತ್ತೆ' ಅಂತ ಕುಣಿದಾಡಿದ.

***

ನಿದ್ದೆಯ ಗುಂಗಿನಲ್ಲಿ ಇದ್ದ ಗುಂಡನನ್ನು ಎಬ್ಬಿಸಿದ ಹೆಂಡತಿ 'ರೀ.. ಹ್ಯಾಪಿ ಬರ್ತಡೆ ಟೂ ಯು. ನಿಮ್ಮ ಬರ್ತಡೆಗೆ ಐದು ಸಾವಿರ ರೂಪಾಯಿಯ ಗಿಫ್ಟ್ ತಂದಿದ್ದೀನಿ' ಅಂದಳು. ಗುಂಡನಿಗೆ ಆಶ್ಚರ್ಯವಾಗಿ, 'ವೆರಿಗುಡ್ ಎಲ್ಲಿ ತಗೊಂಡು ಬಾ ನೋಡೋಣ' ಅಂದ. ಒಂದೈದು ನಿಮಿಷ ತಾಳಿ, ತಗೊಂಡು ಬರೋದೇನು, ಉಟ್ಕೊಂಡೇ ಬರ್ತೀನಿ!

***

ಮದುವೆಯ ಮಾರನೇ ದಿನ, ಮದುಮಗಳಿಗೆ ಮೇಕಪ್ ಮಾಡಿದ ಬ್ಯುಟೀಷಿಯನ್‌ಗೆ ಒಂದು ಐಫೋನ್ ಗಿಫ್ಟ್ ಕೊಟ್ಟು ಧನ್ಯವಾದ ಹೇಳಿದ. ಖುಷಿಯಿಂದಲೇ ಐಫೋನ್ ಬಾಕ್ಸ್ ತೆರೆದ ಬ್ಯುಟೀಷಿಯನ್‌ಗೆ ಕಂಡದ್ದು ನೋಕಿಯಾ 1100, 'ಸೇಮ್ ಫೀಲಿಂಗ್ ಇಯರ್' ಅಂತ ಬರೆದಿದ್ದ ಲೆಟರ್!

***

ದಿನಸಿ ಅಂಗಡಿ ಮಾಲೀಕನಿಗೆ ಒಬ್ಬ ಕುಡುಕನನ್ನು ತನ್ನ ಅಂಗಡಿಯಲ್ಲಿ ನೌಕರಿಗಾಗಿ ಇಟ್ಟುಕೊಳ್ಳುವ ಸಂದರ್ಭ ಎದುರಾಯಿತು. ಕುಡುಕನಿಗೆ ಕೆಲಸದ ಬಗ್ಗೆ ತರಬೇತಿ ನೀಡಬೇಕೆಂದು ನಿರ್ಧರಿಸಿದ ಮಾಲೀಕ, 'ನೀನು ಗ್ರಾಹಕನಾಗಿ ಬಂದು ಏನಾದರು ದಿನಸಿಯನ್ನು ಕೇಳು' ಎಂದ. ಆಗ ಆ ಕುಡುಕ, 'ನನಗೆ ಹತ್ತು ರೂಪಾಯಿ ಬೆಲ್ಲವನ್ನು ಈ ಬಾಟಲಿಯಲ್ಲಿ ಕೊಡಿ' ಎಂದು ಕೇಳಿದ. ಆಗ ಮಾಲೀಕ, 'ಮೂರ್ಖ, ಬೆಲ್ಲವನ್ನು ಬಾಟಲಿಯಲ್ಲಿ ಕೊಡುವುದಿಲ್ಲ. ಹೋಗು ಇನ್ನೊಮ್ಮೆ ಬಂದು ಹತ್ತು ರೂಪಾಯಿಯ ಬೆಲ್ಲವನ್ನು ಕೊಡಿ' ಎಂದು ಕೇಳಲು ಹೇಳಿದ. ಕುಡುಕ ಹಾಗೆಯೇ ಕೇಳಿದ. ಅದಕ್ಕೆ ಮಾಲೀಕ, 'ಯಾವುದರಲ್ಲಿ ತೆಗೆದುಕೊಂಡು ಹೋಗುತ್ತಿಯಾ' ಎಂದ. ಹಿಂದುಮುಂದು ನೋಡದೆ, 'ಬಾಟಲಿಯಲ್ಲಿ' ಎಂದ ಆ ಕುಡುಕ.

ಸಿಟ್ಟಿಗೆದ್ದ ಮಾಲೀಕ, 'ಥೂ ನಿನ್ನ. ನಿನಗೆ ಗ್ರಾಹಕನಂತೆ ನಟಿಸಲು ಬರುವುದಿಲ್ಲ. ಈಗ ನೀನು ಮಾಲೀಕನಾಗು ನಾನು ಗ್ರಾಹಕನಾಗುತ್ತೇನೆ' ಎಂದು ಗದರಿದ. ಅದಕ್ಕೆ ಕುಡುಕ ಒಪ್ಪಿದ. ಗ್ರಾಹಕನಾಗಿ ಬಂದ ಅಂಗಡಿಯ ಮಾಲೀಕ, 'ಹತ್ತು ರೂಪಾಯಿಯ ಬೆಲ್ಲ ಕೊಡು' ಎಂದು ಕೇಳಿದ. ಮಾಲೀಕನಾಗಿದ್ದ ಕುಡುಕ, 'ಬಾಟ್ಲಿ ತಂದಿದ್ದೀರಾ' ಎಂದ.




ಇದಕ್ಕೆ ಒಂದು ಉದಾಹರಣೆ ಕೊಡೋ ಗುಂಡ.

**ಗುಂಡ:** ವೈ–ಫೈ ಹೈ ಸ್ಪೀಡ್ ಇಂಟರ್‌ನೆಟ್. ಅದು ಫ್ರಿ ಸಿಕ್ಕಾಗ ಬ್ಯಾಟರಿ ಲೋ ಆಯ್ತಂತೆ.

***

**ಬಾಸ್:** ನಿಮಗೆ ಕಾಲ್ ಮಾಡಿದ್ದೆ. ನಿಮ್ಮ ಹೆಂಡತಿ ರಿಸೀವ್ ಮಾಡಿ, 'ನೀವು ಅಡುಗೆ ಮಾಡ್ತಿದ್ದೀರಿ' ಅಂತ ಅಂದ್ರು. ಆಮೇಲೆ ನೀವು ವಾಪಸ್ಸು ಯಾಕ್ರಿ ಕಾಲ್ ಮಾಡ್ಲಿಲ್ಲ?

**ಉದ್ಯೋಗಿ:** ನಾನು ವಾಪಸ್ ಕಾಲ್ ಮಾಡಿದ್ದೆ ಸಾರ್. ನಿಮ್ಮ ವೈಫ್ ಫೋನ್ ರಿಸೀವ್ ಮಾಡಿ, 'ನೀವು ಬಟ್ಟೆ ಒಗೆಯುತ್ತಿದ್ದೀರಿ' ಅಂತ ಹೇಳಿದ್ರು.

***

**ಹೆಂಡತಿ:** ರ್ರೀ.. ಮುಂದಿನ ಜನ್ಮಕ್ಕೂ ನೀವೆ ನನ್ನ ಗಂಡ ಆಗುವಂತೆ ಕೋರಿಕೊಂಡು ವ್ರತ ಮಾಡುತ್ತಿದ್ದೇನೆ.

**ಗಂಡ:** ಮಾಡ್ಕೊ ಹೋಗು. ಇಂತಹ ಬೆದರಿಕೆಗಳಿಗೆ ಹೆದರುವವನು ನಾನಲ್ಲ.

***

**ಹೆಂಡತಿ:** ಏನ್ರೀ ನೀವು, ಯಾವ ತಪ್ಪು ಮಾಡಿಲ್ಲ ಅಂತ ಅಂದ್ರೆ ನಿಮ್ಮ ಫೋನ್‌ಗೆ ಲಾಕ್ ಮಾಡದೆ ಇರಿ ನೋಡೋಣ.

**ಗಂಡ:** ಸುಂದರವಾಗಿದ್ದೀನಿ ಅನ್ನೋ ನಂಬಿಕೆ ನಿನಗಿದ್ದರೆ, ಮೇಕಪ್ ಮಾಡದೆ ಇರು ನೋಡೋಣ.

***

**ಗಂಡ:** ಈ ಶರ್ಟ್ ಒಗೆದಿದ್ದೀಯಾ?

**ಹೆಂಡತಿ:** ನೆಕ್ನೋಡಿ.

**ಗಂಡ:** ಏನಂದೆ ನಾನು ಶರ್ಟ್‌ನ ನೆಕ್ಬೇಕಾ?

**ಹೆಂಡತಿ:** ಹಾಗಲ್ಲರಿ... ಆ ಶರ್ಟ್‌ನ ನೆಕ್ ನೋಡಿ ಅಂದೆ. ಅಂದ್ರೆ ಕಾಲರ್ ನೋಡಿ ಅಂತ. ಕೊಳೆ ಇದ್ರೆ ಒಗೆದಿಲ್ಲ, ಕೊಳೆ ಇಲ್ಲಂದ್ರೆ ಒಗೆದಿದ್ದೀನಿ ಅಂತ.

***

**ಪೋಲೀಸ್:** ಕಳ್ಳತನ ಯಾಕ್ರೋ ಮಾಡ್ತಿರಾ?

**ಕಳ್ಳ:** ನಿಮ್ಮ ಮತ್ತು ನಿಮ್ಮ ಕುಟುಂಬದವರಿಗಾಗಿ.

**ಪೋಲೀಸ್:** ಅದು ಹೆಂಗ್ಲಾ ಹೇಳ್ತಿಯಾ?

**ಕಳ್ಳ:** ನಾವು ಕಳ್ಳತನ ಮಾಡುವುದು ಬಿಟ್ಟರೆ ಸರ್ಕಾರಕ್ಕೆ ನಿಮ್ಮ ಅವಶ್ಯಕತೆ ಏನಿದೆ ಹೇಳಿ ಸ್ವಾಮಿ.

ಸಂಗ್ರಹ: ಶರದ ಕುಲಕರ್ಣಿ, ಬೀದರ್